International Journal of Kannada Research
www.kannadajournal.com

ISSN: 2454–5813
IJKR 2022; 8(2): 104-108
© 2022 IJKR
www.kannadajournal.com
Received: 07-03-2022
Accepted: 13-04-2022

**ಸುಧಾ ಎ. ಆರ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

Corresponding Author:
**ಸುಧಾ ಎ. ಆರ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

# ಅಡಗೂರು – ಸ್ಥಳನಾಮ ವಿವೇಚನೆ

## ಸುಧಾ ಎ. ಆರ್

ಕನ್ನಡ ನಾಡು ಸಂಸ್ಕೃತಿಯ ನೆಲೆಬೀಡಾಗಿದ್ದು ಸುಮಾರು ೨೦೦೦ ಸಾವಿರ ವರ್ಷಗಳ ಇತಿಹಾಸವನ್ನು ಒಳಗೊಂಡಿದೆ. ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಕಷ್ಟು ಶ್ರೀಮಂತಿಕೆಯನ್ನು ಪಡೆದುಕೊಂಡ ನಾಡು ಇದಾಗಿದೆ. ಇಂತಹ ಕನ್ನಡ ನಾಡಿನಲ್ಲಿ ಅನೇಕ ಜಾತಿ, ಧರ್ಮ, ಜನಾಂಗಗಳ ಜನರು ವಿಭಿನ್ನ ರೀತಿಯ ಸಂಸ್ಕೃತಿಯನ್ನು ಅನುಸರಿಸಿಕೊಂಡು ಜೀವನವನ್ನು ಕಂಡುಕೊಂಡಿದ್ದಾರೆ. ಮಲೆನಾಡಿನ ತವರೂರು, ಶಿಲ್ಪಕಲೆಗಳ ತವರೂರು ಎಂಬ ಹೆಗ್ಗಳಿಕೆಗೆ ಪಾತ್ರವಾದ ಹಾಸನ ಜಿಲ್ಲೆಗೆ ತನ್ನದೇ ಆದ ಮಹತ್ವವಿದೆ. ಹಾಸನದಿಂದ ಹಳೇಬೀಡಿಗೆ ಹೋಗುವ ಮಾರ್ಗದಲ್ಲಿ ಅಡಗೂರು ಎಂಬ ಗ್ರಾಮವಿದೆ. ಹಳ್ಳಿ ಮತ್ತು ನಗರ ಸಂಸ್ಕೃತಿಗಳೆರಡನ್ನೂ ಒಳಗೊಂಡಿರುವ ಈ ಗ್ರಾಮವು ತನ್ನದೇ ಆದ ವೈಶಿಷ್ಟತೆಯನ್ನು ಒಳಗೊಂಡಿದೆ.

ಪ್ರತಿಯೊಂದು ಹಳ್ಳಿಗಳೂ ಒಂದೊಂದು ವಿಶ್ವಕೋಶವಿದ್ದಂತೆ. ಅದನ್ನು ತೆಗೆದು ನೋಡುತ್ತಾ ಹೋದಂತೆ ಹಲವಾರು ಅಂಶಗಳು ಬೆಳಕಿಗೆ ಬರುತ್ತವೆ. ಯಾವುದೇ ಒಂದು ಹಳ್ಳಿಯ ಅಥವಾ ಗ್ರಾಮದ ಹೆಸರಿನ ಹಿನ್ನೆಲೆಯನ್ನು ಕುರಿತು ಹಲವಾರು ಚಿಂತಕರು ವಿಶ್ಲೇಷಿಸಿದ್ದಾರೆ. ಒಂದು ಕೆರೆಕಟ್ಟೆಯ ಸ್ಥಾಪನೆಯ ಕುರಿತಾಗಿ, ಗ್ರಾಮಗಳ ಸ್ಥಾಪನೆಯ ಕುರಿತಾಗಿ ದೇವಾಲಯದ ಕುರಿತಾಗಿ ಅನೇಕ ಕಥೆಗಳು, ಪುರಾಣಗಳು, ಐತಿಹ್ಯಗಳು, ಹಿನ್ನೆಲೆಗಳು ಇರುತ್ತವೆ. ಈ ನೆಲೆಯಲ್ಲಿ ಅಡಗೂರಿನ ಸ್ಥಳನಾಮದ ಕುರಿತು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

"ಸ್ಥಳನಾಮಗಳ ಅಧ್ಯಯನ ಕೈಗೊಂಡಾಗ ಪುರಾತನ ಮಾನವನು ಊರು, ಕೇರಿಗಳನ್ನು ನಿರ್ಮಿಸಿಕೊಂಡ ಬಗೆ, ಸ್ಥಳನಾಮವನ್ನು ನಿರ್ದೇಶಿಸುವ ಕಾರಣ, ಪ್ರಯೋಜನ ಇವೆಲ್ಲ ಒಮ್ಮೆಲೇ ಮನದಟ್ಟಾಗುವುವು. ಮನುಷ್ಯ ಕಲ್ಲಿನ ಗುಹೆಗಳಲ್ಲಿ ವಾಸ ಮಾಡುವ ಕಾಲವೊಂದಿತ್ತು. ಕಾಲ ಕ್ರಮೇಣ ವ್ಯವಸಾಯ ಕಲಿತ ಮಾನವ ತನ್ನ ವಾಸಕ್ಕಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವ್ಯವಸ್ಥಿತ ಜೀವನ ರೂಢಿಸಿಕೊಂಡ. ವ್ಯವಸ್ಥಿತ ಜೀವನದ ಫಲವಾಗಿಯೇ ಊರು ಕೇರಿಗಳು ನಿರ್ಮಾಣವಾದವು. ಮಾನವ ತನ್ನ ಅಲೆಮಾರಿ ಜೀವನವನ್ನು ಕೈ ಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಬದುಕಿಗೆ ಒಗ್ಗಿಕೊಳ್ಳುವುದು ಸಾಧ್ಯವೆಂದು ತಿಳಿದನೋ ಆಗ ಊರು – ಹಳ್ಳಿಗಳ ಉಗಮವಾಯಿತು. ನೆಲದೊಂದಿಗಿನ ಈ ಹೋರಾಟದ ಪ್ರಕ್ರಿಯೆಯಲ್ಲಿ ತಾನು

ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ಅವನ ಬದುಕಿನಲ್ಲಿ ಹಾದು ಹೋದ ಕುರುಹಾಗಿ ಒಂದು ಹೆಸರು ಜನ್ಮ ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ ಇಲ್ಲದಿರಲಿ ಒಂದು ಜನಾಂಗದ ಸಂಸ್ಕೃತಿಯನ್ನು ಹೊತ್ತ ಆ ಗುರುತು ಹಾಗೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಳೆಯುವ ಸಂಸ್ಕೃತಿಯು ಒಂದು ಕೊಂಡಿಯೇ ಸ್ಥಳನಾಮ". ಸಕಲೇಶಪುರದ ಸ್ಥಳನಾಮಗಳು – ಡಾ. ವಿಶ್ವನಾಥ್

ಅಡಗೂರು ಗ್ರಾಮವು ಒಂದು ಸಾವಿರದ ನೂರ ನಲವತ್ತೈದು ಎಕರೆ ಇಪ್ಪತ್ತೆಂಟು ಗುಂಟೆ ಭೌಗೋಳಿಕ ವಿಸ್ತೀರ್ಣವನ್ನೊಳಗೊಂಡಿದ್ದು, ಹಲವು ಜಾತಿ, ಧರ್ಮಗಳ ೬೫೦ಕ್ಕೂ ಹೆಚ್ಚು ಕುಟುಂಬಗಳನ್ನು ಒಳಗೊಂಡಿದೆ. ಸುಮಾರು ನೂರ ಇಪ್ಪತ್ತೈದು ಎಕರೆಯಲ್ಲಿ ವಿಸ್ತಾರವಾದ ದೊಡ್ಡ ಕೆರೆ ಇದ್ದು, ಇದು ತ್ರಿಭುಜಾಕೃತಿಯಲ್ಲಿ ಕಂಡು ಬರುತ್ತದೆ. ಈ ಕೆರೆಗೆ ಮೂರು ಮೂಲಗಳಿಂದ ನೀರು ಹರಿದು ಬರುತ್ತದೆ. ಅವುಗಳೆಂದರೆ ರಾಮೇಶ್ವರನ ಹಳ್ಳ, ದೊಡ್ಡಳ್ಳ, ನೀರಳ್ಳ. ರಾಮೇಶ್ವರನ ಹಳ್ಳದಿಂದ ನೀರು ಹರಿದು ಬರಲು ಒಂದು ಒಡ್ಡನ್ನು ನಿರ್ಮಿಸಲಾಗಿದ್ದು ಅದರ ವಿಸ್ತೀರ್ಣ ೨೨ ಎಕರೆಗಳಿದ್ದು, ಅದನ್ನು ಡಣಾಯಕನ ಕೆರೆ ಎಂದು ಕರೆಯುತ್ತಾರೆ. ಹೊಯ್ಸಳರ ದಂಡನಾಯಕನಾದ ಮಾರಸಿಂಗ ನಾಯಕನು ಈ ಕೆರೆಯನ್ನು ಕಟ್ಟಿಸಿದ್ದಾಗಿ ಹೇಳುತ್ತಾರೆ. ಹಿಂದೂ ಸಂಪ್ರದಾಯದ ಪ್ರಕಾರ ಯಾವುದೇ ಒಂದು ಗ್ರಾಮವನ್ನು ಸ್ಥಾಪನೆ ಮಾಡಬೇಕಾದರೆ ಗಣಪತಿ, ಈಶ್ವರ ಲಿಂಗ, ಕರೆಗಲ್ಲು, ಆಂಜನೇಯ, ನಂದಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಹೇಳುತ್ತಾರೆ. ಈ ಎಲ್ಲಾ ಕುರುಹುಗಳನ್ನು ಈ ಗ್ರಾಮದಲ್ಲಿ ನೋಡ ಬಹುದು.

## ಜಾನಪದೀಯ ಹಿನ್ನೆಲೆ

ಅಡಗೂರು ಸ್ಥಳನಾಮ ವಿವೇಚನೆಯನ್ನು ಜಾನಪದೀಯ ಹಿನ್ನೆಲೆಯಲ್ಲಿ ನೋಡುವುದಾದರೆ ಎರಡು ಬಗೆಯ ಹಿನ್ನೆಲೆಗಳನ್ನು ಗುರುತಿಸ ಬಹುದು.

1. "ಹೊಯ್ಸಳ ರಾಜ ರಾಣಿಯರು ವಿಹಾರಕ್ಕೆ, ಬೇಟೆಗೆ ಇಲ್ಲಿನ ಗುಡ್ಡಗಾಡು ಪ್ರದೇಶಗಳಿಗೆ ಬರುತ್ತಿದ್ದ ಸಂದರ್ಭದಲ್ಲಿ ಅಡಿಗೆ ಮಾಡಿ ಬಡಿಸುತ್ತಿದ್ದರು. ಅಡಿಗೆ ಮಾಡಿ ಬಡಿಸುತ್ತಿದ್ದ ಊರು ಅಡುಗೂರು, ಹಳೇಬೀಡಿನಲ್ಲಿ ದೇವಾಸ್ಥಾನ ಕಟ್ಟಿಸುತ್ತಿದ್ದ ಸಂದರ್ಭದಲ್ಲಿ ಇಲ್ಲಿಂದ ಅಡುಗೆ ಮಾಡಿ ಊಟವನ್ನು ಒಯ್ಯುತ್ತಿದ್ದರಂತೆ. ಆ ಕಾರಣ ಅಡುಗೆ ಮಾಡುವ ಊರು ಅಡುಗೂರು ಎಂದು ಹೇಳುತ್ತಾರೆ.
2. ಹೊಯ್ಸಳ ಆಳ್ವಿಕೆಯ ಸಂದರ್ಭದಲ್ಲಿ ಅವರ ರಾಜಧಾನಿಯಾಗಿದ್ದ ದ್ವಾರಸಮುದ್ರಕ್ಕೂ ಅಡಗೂರಿಗೂ ಸುರಂಗ ಮಾರ್ಗವಿದ್ದುದಾಗಿ ತಿಳಿದು ಬರುತ್ತದೆ. "ಈ ಅರಸರ ಕಾಲದಲ್ಲಿ ಅಡಗೂರು ಆಗ್ನೆ ಸುಮಾರು ಐದು ಮೈಲಿ ಹತ್ತಿರದಲ್ಲಿತ್ತು. ಈ ಗ್ರಾಮವು ಸುತ್ತಲೂ ಗುಡ್ಡ-ಗಾಡುಗಳಿಂದ ಆವೃತವಾಗಿದ್ದು, ಹೊರಗಡೆಯ ಶತೃಗಳಿಗೆ ರಹಸ್ಯವಾಗಿತ್ತು. ಹಾಗಾಗಿ ಅರಸರು ತಮ್ಮ ಸೈನಿಕರನ್ನೂ, ಶಸ್ತ್ರಾಸ್ತ್ರಗಳನ್ನೂ ಅಡಗಿಸಿಡುತ್ತಿದ್ದರು. ಅಡಗಿಸಿಟ್ಟ ಊರು ಅಡಗೂರು ಆಯಿತು." – ಹೀ. ಚಿ ಶಾಂತವೀರಯ್ಯ. ಸಾಹಿತಿಗಳು, ಬೆಂಗಳೂರು.

ಯಾವುದೇ ಒಬ್ಬ ರಾಜ ಶತ್ರುಗಳ ಮೇಲೆ ದಾಳಿ ಮಾಡಬೇಕಾದರೆ ರಾಜಧಾನಿಯ ಮೇಲೆ ಮೊದಲು ಆಕ್ರಮಣ ಮಾಡುತ್ತಾರೆ. ಹಾಗಾಗಿ ರಾಜರುಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸೈನಿಕರನ್ನು, ಶಸ್ತ್ರಾಸ್ತ್ರಗಳನ್ನು ರಹಸ್ಯ ಸ್ಥಳಗಳಲ್ಲಿ ಬಚ್ಚಿಡುತ್ತಿದ್ದರು. ಹಾಗಾಗಿ ಹೊಯ್ಸಳ ರಾಜರುಗಳು ಸಹ ಅಡಗೂರಿನಲ್ಲಿ ಶಸ್ತ್ರಾಸ್ತ್ರಗಳನ್ನು, ಸೈನಿಕರನ್ನು ಅಡಗಿಸಿಟ್ಟಿದ್ದರಂತೆ. ಇದಕ್ಕೆ ದಾಖಲೆಗಳು ಇಂದಿಗೂ ದೊರೆಯುತ್ತವೆ. ಅಡಗೂರು ದಾಖಲೆಗೆ ಸೇರಿದ ಕಾಶೀಪುರ ದೇವಸ್ಥಾನಗಳಲ್ಲಿ ಆನೆ, ಕುದುರೆ, ಕಾಲಾಳುಗಳು ನಿಲ್ಲಲು ನಿರ್ಮಿಸಿದ ಸ್ಥಳಗಳ ಅವಶೇಷಗಳನ್ನು ಕಾಣಬಹುದು. ಹಾಗೂ ಇಲ್ಲಿನ ಮನೆಗಳಲ್ಲಿ ಕತ್ತಿ, ಗುರಾಣಿಗಳು ಇಂದಿಗೂ ಕಾಣ ಸಿಗುತ್ತವೆ. ಅಡಗು+ಊರು=ಅಡಗೂರು. ನಿಘಂಟಿನಲ್ಲಿ ಅಡಗು ಶಬ್ದಕ್ಕೆ ಯಾರಿಗೂ ಕಾಣದಿರು, ಗೌಪ್ಯ, ರಹಸ್ಯ ಮುಂತಾದ ಅರ್ಥಗಳಿವೆ. ಹಾಗಾಗಿ ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.

ಈ ಅಭಿಪ್ರಾಯಕ್ಕೆ ಸಮರ್ಥನೆಯನ್ನು ಕೊಡುವುದಾದರೆ ಇಂದಿಗೂ ಈ ಊರು ಸುತ್ತ ಮುತ್ತಲೂ ಗುಡ್ಡಗಳಿಂದ ಆವೃತವಾಗಿದೆ. ಕರಡಿಗುಡ್ಡ, ರಾಶಿಗುಡ್ಡ, ಮೂಡಲ ಗುಡ್ಡ, ಗರೇದಗುಡ್ಡ, ಕೋಣನ ಗುಡ್ಡ, ಮುಂತಾದ ಗುಡ್ಡಗಳಿವೆ. ಈ ಊರಿನಲ್ಲಿ ನಿಂತು ನೋಡಿದರೆ ಪುಷ್ಪಗಿರಿ ಬೆಟ್ಟ. ಹುಲೀಕಲ್ಲೇಶ್ವರ ಬೆಟ್ಟ, ಹಳೇಬೀಡಿನ ಆನೆಗುಡ್ಡ ಎಲ್ಲವೂ ಕಾಣಿಸುತ್ತವೆ. ಆದರೆ ಕಣಿವೆಯಲ್ಲಾಗಲಿ, ಪುಷ್ಪಗಿರಿ ಬೆಟ್ಟದಲ್ಲಾಗಲಿ ನಿಂತು ನೋಡಿದರೆ ಈ ಊರು ಕಾಣುವುದಿಲ್ಲ. ಸುತ್ತಲೂ ಗುಡ್ಡವಿದ್ದು ಮಧ್ಯದಲ್ಲಿ ಊರಿದೆ. ಪ್ರಕೃತಿ ನಿರ್ಮಿತ ರಕ್ಷಣೆ ಈ ಊರಿಗಿದೆ.

### ಶಾಸನಗಳ ಹಿನ್ನೆಲೆ

ಪಾಳು ಕಲ್ಲೇಶ್ವರ ದೇವಸ್ಥಾನದ ಬಳಿ ನೆಟ್ಟಿರುವ ಕಲ್ಲು

1. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯನಗರಾರಂಭ
2. ಮೂಲಸ್ತಂಭಾಯ ಶಂಭವೇ !!
3. ನ ಶಕ ವರುಷ ೧೧
4. ದಲು ಶ್ರೀ ಮನ್ಮಹಾ ಮಂಡಳೇಶ್ವರ
5. ವಡೆಯರ ಕುಮಾರ ದಂಡರಾಜಿಗಳು ವಡಗೂರ ದೇವದಾನ ಮಾನ್ಯಕ್ಕೆ ಕೊಟ್ಟ
6. ಹೊಲ ಗದ್ದೆಯ ವಿವರ

### ವೀರಭದ್ರ ದೇವಸ್ಥಾನದೊಳಗೆ ಇಟ್ಟಿರುವ ಕಲ್ಲು

1. ನಮಸ್ತುಂಗ ಶಿರಸ್ತುಂಗ ಚಂದ್ರ ಚಾಮರ ಚಾಮರವೇ । ತ್ರೈಲೋಕ್ಯ.
2. ನಗರಾರಂಭ ಮೂಲ ಸ್ತಂಭಾಯ ಶಂಭವೇ ॥
3. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಕವರ್ಷ ೧೪೪೫ ನೆಯ ಶುಭ ಕ್ರು.
4. ತು ಸಂವತ್ಸರದ ಕಾರ್ತಿಕ ಸು ೧೫ ಗುರುವಾರದಂದು ಸ್ವಸ್ತಿ ಶ್ರೀ ಶ್ರೀ.
5. ಪರ್ವ್ವತ ಶ್ರೀ ಸ್ವಯಂಭು ಶ್ರೀ ಲಿಂಗ ಚಕ್ರವರ್ತಿ ಶ್ರೀ ಮಲ್ಲಿಕಾರ್ಜುನ
6. ಮಹಾಲಿಂಗದೇವರ ದಿವ್ಯ ಶ್ರೀಪಾದ ಪದ್ಮಾರಾಧಕರುಮಪ್ಪ ಶ್ರೀ
7. ಕಯಿಲಾಸದ ಮೇಲಣ ದ್ಯಾವಾ ಪೃಥ್ವಿ ಮಹಾಮಹತ್ತುವಿಂ
8. ಗೆ ಮುಖ್ಯವಾದ ವದಾಂನ್ಯದ ಅಯ್ಯಗಳ ಆಗ್ನಾಧಾರಕರು
9. ಮಪ್ಪ ಸಿಂಗೀರಾಜ ಅಯ್ಯಗಳು ವಡಗೂರ ಶ್ರೀ ವೀರಭದ್ರದೇವ
10. ರಿಗೆ ಕೊಟ್ಟ ಧರ್ಮ ಶಾಸನದ ವದಾನ್ಯದ ಅಯ್ಯಗಳಿಗೆ ತಪೋ
11. ರಾಜ್ಯವ ಹಂತಾಗಿ ವಡುಗೂರಲು ಸೂಸ್ತುಗೆಯಾಗಿ ಎತ್ತಿ ಬಹ
12. ಗಣಾಬಾಧ ವರಹಗಳಿಗೆ ದೇವರ [ದೀ] ಪ್ತಿ ನೈವೇದ್ಯಕ್ಕೆ ಕೊಟ್ಟದುವ
13. ರಹ -------ವೆರಡು ಹೊನ್ನನು ಕೊಟ್ಟೆವಾಗಿ ಈಧಮರ್ಮ್ಮವನು---ದು
14. ಸೋವರ್-------- ಈ ಕಲಿ ದೇವ ಅಯ್ಯಗಳು
15. ಭಕ್ತರ ಮುಂದಿಟ್ಟು ಕೊಟ್ಟವಾಗಿ ಯಾ ಧರ್ಮವನು ಆ ಚಂದ್ರಾರ್ಕ್ಕ
16. ಸ್ಥಾಯಿ ಆಗಿ ದೇವರ ದೀಪ್ತಿನಯಿವೇದ್ಯಕ್ಕೆ ಎರಡು ಹೊನ್ನನು
17. ಈ ಧರ್ಮಕ್ಕೆ, ಆರೊಬರು ತಪ್ಪಿದವರು ತಂ
18. ವಕ್ಕೆ ತಪ್ಪಿದವನು ತಂಮ ತಂದೆ ತಾಯಿ
19. ವಧೆಯನು ವಾರಾಣಾಸಿಯಲು ಕೊಂದ ಪಾಪ
20. ದಲಿ ಹೋಹರು -----ಬರಸಿದಂ -ಸಾಸನ ಶ್ರೀ

### ಲಕ್ಷ್ಮೀ ನಾರಾಯಣ ದೇವಾಲಯದಲ್ಲಿರುವ ಕಲ್ಲು

1. ಎರೆಯಮರಸ ಏಚಲದೇವಿಯ ಬಿಟ್ಟಧರ್ಮ
2. ವಡುಗ ನಾರಾಯಣ ದೇವ ದವರು
3. ಮಡಿಸಿದ ಚವುಂಡರಾಯ ।

ಪ್ರಾಚೀನ ಕಾಲದ ಇತಿಹಾಸವನ್ನು ತಿಳಿಸುವಲ್ಲಿ ಶಾಸನಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಪಾಳು ಕಲ್ಲೇಶ್ವರ ದೇವಸ್ಥಾನದ ಬಳಿ ನೆಟ್ಟಿರುವ ಕಲ್ಲು ವೀರಭದ್ರ ದೇವಸ್ಥಾನದೊಳಗೆ ಇಟ್ಟಿರುವ ಕಲ್ಲುಗಳಲ್ಲಿ ವಡಗೂರು ಎಂಬ ಉಲ್ಲೇಖವನ್ನು ಕಾಣಬಹುದು. "ವಡೆಯರ ಕುಮಾರ ದಂಡ ರಾಜಿಗಳು ವಡಗೂರ ದೇವದಾನ ಮಾನ್ಯಕ್ಕೆ ಕೊಟ್ಟ ಹೊಲಗದ್ದೆಯ ವಿವರ", "ಸಿಂಗಿರಾಜ ಅಯ್ಯಗಳು ವಡುಗೂರ ಶ್ರೀ ವೀರಭದ್ರ ದೇವರಿಗೆ ಕೊಟ್ಟ ಧರ್ಮಶಾಸನವೇ" ಈ ಎರಡು ದಾನ ಶಾಸನಗಳಲ್ಲಿ ವಡುಗೂರು ಎಂದಿದೆ. ಈ ಊರಿನ ಪ್ರಾಚೀನ ಹೆಸರು ವಡುಗೂರು ಎಂಬುದಾಗಿ ಶಾಸನಗಳಿಂದ ತಿಳಿದು ಬರುತ್ತದೆ.

"ಇತಿಹಾಸ ಮತ್ತು ಸಾಹಿತ್ಯ ಸಂಶೋಧಕ ಡಾ. ಶ್ರೀವತ್ಸ ಎಸ್ ವಟಿಯವರ ಪ್ರಕಾರ "ವೆಡಗನಾರಾಯಣಸ್ವಾಮಿ

ದೇವಾಲಯವಿರುವುದರಿಂದ ವೆಡಗನೂರು ಎಂದು ಹೆಸರಿದ್ದ ಗ್ರಾಮ ಕ್ರಮೇಣ ಅಡಗೂರು ಎಂದು ಮಾರ್ಪಟ್ಟಿದೆ", ಎಂದು ಅಭಿಪ್ರಾಯ ಪಟ್ಟಿದ್ದಾರೆ.""

ವೆಡಗ ನಾರಾಯಣ ದೇವಾಲಯವಿರುವುದರಿಂದ ವೆಡಗನೂರು ಎಂದಾಯಿತೋ ಅಥವಾ ವೆಡಗನೂರಿನಲ್ಲಿ ಈ ದೇವಾಲಯ ಸ್ಥಾಪನೆ ಮಾಡಿದ ಕಾರಣಾಕ್ಕಾಗಿ ದೇವಾಲಯಕ್ಕೆ ಈ ಹೆಸರು ಬಂತೋ ಎಂದು ನಮ್ಮನ್ನು ಚಿಂತನೆಗೆ ಒಳಗು ಮಾಡುತ್ತದೆ. ಯಾವುದೇ ಒಂದು ಶಾಸ್ತ್ರ ಸೈದ್ಧಾಂತಿಕ ರೂಪ ಪಡೆಯಬೇಕಾದರೆ ಅದರ ಪ್ರಾಥಮಿಕ ಹೆಜ್ಜೆಗಳು ಅಸ್ಪಷ್ಟವಾಗಿರುವಂತೆ ಒಂದು ಊರಿನ ಸ್ಥಾಪನೆ ಕುರಿತಾಗಿ ಕೂಡಾ ಪ್ರಾರಂಭದ ಹೆಜ್ಜೆಗಳಲ್ಲಿ ಅಸ್ಪಷ್ಟತೆ ಇರುವುದನ್ನು ಗುರುತಿಸಬಹುದು.

ಹೊಯ್ಸಳರ ಆಳ್ವಿಕೆಗಿಂತ ಪೂರ್ವ ಇತಿಹಾಸ ಈ ಊರಿಗಿದೆ. ಹೊಯ್ಸಳರ ಕಾಲದಲ್ಲಿ ಅಡಗೂರು ಎಂದು ಪರಿವರ್ತಿತವಾಗಿರಬಹುದು. ಅದಕ್ಕೂ ಮುಂಚೆ ವೆಡಗನೂರು ಅಥವಾ ವಡುಗೂರು ಎಂದು ಇರುವುದು ತಿಳಿದು ಬರುತ್ತದೆ. ಹೊಯ್ಸಳರಿಗಿಂತ ಹಿಂದಿನ ರಾಜರುಗಳು ಇಲ್ಲಿ ಆಳ್ವಿಕೆ ನಡೆಸಿರಬಹುದು. ಏಕೆಂದರೆ ಇಲ್ಲಿನ ಒಂದೆರೆಡು ದೇವಾಲಯಗಳು ಅಂದರೆ ಪಾಳು ಕಲ್ಲೇಶ್ವರ ದೇವಾಲಯ ಮುಂತಾದವು ಚೋಳರ ಕಾಲದವು ಎಂದು ಇಲ್ಲಿನ ಜನರು ಹೇಳುತ್ತಾರೆ. ಒಟ್ಟಾರೆಯಾಗಿ ಹೊಯ್ಸಳರ ಕಾಲದಲ್ಲಿ ಈ ಊರು ಹೆಚ್ಚು ಪ್ರಸಿದ್ಧಿಗೆ ಬಂದಿದೆ ಎನಿಸುತ್ತದೆ.

ಕನ್ನಡಿಗರು ಸಂಕ್ಷಿಪ್ತ ಪ್ರಿಯರು. ಉದಾಹರಣೆಗೆ- ದೊಡ್ಡ ದೊಡ್ಡ ಹೆಸರುಗಳನ್ನು ಚಿಕ್ಕದಾಗಿ ಕರೆಯಲು ಬಯಸುತ್ತಾರೆ. ಈ ಹಿನ್ನೆಲೆಯಲ್ಲಿ ಹೆಸರುಗಳು ಪರಿವರ್ತನೆಯಾಗುತ್ತವೆ. ಸಂಪಿಗೆ ಮರದ ಕೊಪ್ಪಲು ಎಂಬುದನ್ನು ಎಸ್.ಎಂ.ಕೊಪ್ಪಲು. ಬೀರಪುಟ್ಟನ ಕೊಪ್ಪಲು ಎಂಬುದನ್ನು ಬಿ.ಪಿ.ಕೊಪ್ಪಲು ಎಂಬುದಾಗಿ ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ವೆಡಗನೂರು ಕಾಲಾಂತರದಲ್ಲಿ ವಡುಗೂರು ಆಗಿ. ಮಾರ್ಪಟ್ಟಿರಬಹುದು. ನಂತರ 'ವ' ಕಾರ 'ಅ' ಕಾರವಾಗಿ ಅಡುಗೂರು ಎಂದು ಮಾರ್ಪಾಡಾಗಿದೆ ಎನಿಸುತ್ತದೆ..

ಪ್ರಸ್ತುತ ಕೂಡ ಅಡುಗೂರು ಎಂದು ಸರಿಯಾಗಿ ಕರೆಯುವುದಿಲ್ಲ. ಅಡಗೂರ್. ಅಡಗೂರು ಮುಂತಾದ ರೂಪಗಳಲ್ಲಿ ಬಳಸಲ್ಪಡುತ್ತಿದೆ. ಒಟ್ಟು ಐದು ಅಡಗೂರು ಇರುವುದಾಗಿ ತಿಳಿದು ಬರುತ್ತದೆ. ಪಿರಿಯಾಪಟ್ಟಣ, ಗುಬ್ಬಿ, ಚನ್ನರಾಯಪಟ್ಟಣ ಬಳಿ ಅಡಗೂರು ಎಂಬ ಗ್ರಾಮಗಳಿವೆ. ಗೊಪ್ಪೇನಹಳ್ಳಿ ಬಳಿ ಕೂಡ ಅಡಗೂರು ಇದೆ. ಅಡಗು ಅಂಚೇನಹಳ್ಳಿ ಎಂದು ಕೂಡ ಒಂದು ಊರು ಇದೆ. ಒಟ್ಟಾರೆಯಾಗಿ ಅಡುಗೂರು ಸ್ಥಳನಾಮವನ್ನು ಕುರಿತು ಚರ್ಚಿಸುವಾಗ ಎರಡು ಹಿನ್ನಲೆಗಳು ದೊರೆಯುತ್ತವೆ. ಯಾವುದೇ ಒಂದು ಖಚಿತವಾದ ನಿರ್ದಿಷ್ಟವಾದ ಕಾರಣವನ್ನು ಕೊಡಲು ಸಾಧ್ಯವಿಲ್ಲ. ವೆಡಗನೂರು, ವಡುಗೂರು, ಅಡುಗೂರು ಮೂರು ಹೆಸರುಗಳು ಒಂದೊಂದು ಕಾಲ ಘಟ್ಟದಲ್ಲಿ ಕಂಡು ಬರುತ್ತವೆ. ವಡುಗೂರು, ಎಂಬುದಕ್ಕೆ ಶಾಸನಗಳ ಆಧಾರ ದೊರೆಯುತ್ತದೆ. ಜಾನಪದೀಯ ಹಿನ್ನೆಲೆಯಲ್ಲಿ ಚರ್ಚಿಸಿದ ಎರಡನೇ ಆಧಾರ ಹೆಚ್ಚು ಸ್ಪಷ್ಟ ಮತ್ತು ಅಡಗೂರು ಸ್ಥಳನಾಮಕ್ಕೆ ಹೆಚ್ಚು ಹತ್ತಿರವಾಗುವಂತೆ ಕಂಡು ಬರುತ್ತದೆ. ಹಾಗೆಂದ ಮಾತ್ರಕ್ಕೆ ವಡುಗೂರು ಎಂಬುದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ವಡುಗೂರು ಭಾಷೆಯ ನಿರಂತರ ಚಲನಶೀಲ ಗುಣದಿಂದ ಅಡುಗೂರು ಆಗಿ ಮಾರ್ಪಾಡಾಗಿರುವ ಸಾಧ್ಯತೆ ಕೂಡ ಇರುವುದನ್ನು ಮರೆಯುವಂತಿಲ್ಲ.

## ಪರಾಮರ್ಶನ ಗ್ರಂಥಗಳು


1. ಎಪಿಗ್ರಫಿಯ ಕರ್ನಾಟಕ ಒಂಭತ್ತನೇ ಸಂಪುಟ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವ ವಿದ್ಯಾನಿಲಯ-೧೯೮೪
2. ಚಂದ್ರಶೇಖರ ಕಂಬಾರ ಡಾ.(ಸಂ) ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧ ಕನ್ನಡ ಸಾಹಿತ್ಯ ಪರಿಷತ್ತು. ಚಾಮರಾಜಪೇಟೆ, ಬೆಂಗಳೂರು–1985
3. ಮಳಲಿ ವಸಂತ ಕುಮಾರ್ (ಪ್ರ.ಸಂ.) ಹೊಯ್ಸಳ ಸಂಪದ ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹಾಸನ–1996
4. ರಾಘವೇಂದ್ರ ಹೊಳ್ಳ, ಬೇಲೂರು ಲೇಖನ- ಅಡಗೂರಿನ ಲಕ್ಷ್ಮೀನಾರಾಯಣ ದೇವಾಲಯದ ದುಸ್ಥಿತಿ ಪತ್ರಿಕೆ-ವಿಜಯ ಕರ್ನಾಟಕ

5. ವಿಶ್ವನಾಥ್ (ಡಾ.) ಸಕಲೇಶಪುರ ಪರಿಸರದ ಸ್ಥಳನಾಮಗಳು. ದೇವಿ ಪ್ರಕಾಶನ ನಂ.೬೪೩.ಪ್ರೋರ್ಟ ಮೊಹಲ್ಲಾ ಬಸವೇಶ್ವರ ರಸ್ತೆ ಮೈಸೂರು-೫೭೦೦೦೪. ಮುದ್ರಣ-೧೯೯೭
6. ಶಿವಕುಮಾರ್.ಸಿ.ಎಸ್.(ಸಂ) ಕರ್ನಾಟಕ ಜಾತ್ರೆಗಳು, ಪ್ರಸಾರಾಂಗ:ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್
7. ಸಣ್ಣಯ್ಯ.ಬಿ.ಎಸ್.-ಗದ್ಯಾನುವಾದ ದೇವಚಂದ್ರನ ರಾಜಾವಳೀ ಕಥಾಸಾರ ಶ್ರೀ ಕನಕ ಗಿರಿ ಪ್ರಕಾಶನ. ಅತಿಶಯ ಸಿದ್ಧಿ ಕ್ಷೇತ್ರ ಮಲೆಯೂರು ೫೭೧೧೨೮. ಮುದ್ರಣ-೨೦೦೦
8. ಊಔಜಖಂಐಂ ೦ಖಅಊಋಖಇಗಖಇ ಫಡಿಣಣಜಟಿ ಛಧಿ ಉಜಡಿಚಿಜ ಈಠಜಇಜಟಚಿ ಕಣಛಟ್ಝುಜಜ ುಟಿ 1994 ಃಧಿ ಃಠಠಇ ಚಿಟಿಜ ಃಠಠಇ ಓಜತಿ ಆಝುಟು